# ನಟನೆ ಜೊತೆ ಗೀತ ಗಾನ

'ಬ್ರಹ್ಮಗಂಟು' ಧಾರಾವಾಹಿ ಮೂಲಕ ನಟನೆಯತ್ತ ಹೊರಳಿದ ಗೀತಾ ಭಾರತಿ ಭಟ್, 'ರವಿಕೆ ಪ್ರಸಂಗ' ಸಿನಿಮಾದಲ್ಲಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಥರಾವರಿ ಪಾತ್ರಗಳಲ್ಲಿ ತಮ್ಮನ್ನು ಪ್ರಯೋಗಿಸಿಕೊಳ್ಳುವ ಜೊತೆಗೆ ಗಾಯಕಿಯಾಗಿಯೂ ಹೆಸರು ಗಳಿಸಬೇಕೆನ್ನುವ ಆಸೆ ಅವರದ್ದು.

■ ಸುಮಲತಾ ಎನ್



'ಬ್ರಹ್ಮಗಂಟು' ಧಾರಾವಾಹಿಯಲ್ಲಿ ಗುಂಡಮ್ಮನಾಗಿ ಜನರ ಮನಸ್ಸು ಗೆದ್ದವರು ನಟಿ ಗೀತಾ ಭಾರತಿ ಭಟ್. ಗಾಯಕಿಯಾಗುವ ಆಸೆ ಹೊತ್ತು ಕಾರ್ಪೊರೇಟ್ ಕೆಲಸ ಬಿಟ್ಟುಬಂದ ಅವರ ಮುಂದೆ ತೆರೆದುಕೊಂಡದ್ದು ಕಿರುತೆರೆ ಲೋಕ. ಧಾರಾವಾಹಿಯಲ್ಲಿ ನಟಿಸಿದ ನಂತರ 'ಅಂಬಿ ನಿಂಗ್ ವಯಸ್ಸಾಯ್ತೊ', 'ಲವ್ ಮಾಕ್ಟೇಲ್', 'ಮಂಕುಭಾಯ್ ಫಾಕ್ಸಿ ರಾಣಿ' ಸಿನಿಮಾಗಳಲ್ಲಿ ಕಾಣಿಸಿಕೊಂಡ ಅವರೀಗ 'ರವಿಕೆ ಪ್ರಸಂಗ' ಸಿನಿಮಾಗೆ ನಾಯಕಿ.

ದಕ್ಷಿಣ ಕನ್ನಡದವರಾದ ಗೀತಾ ಹುಟ್ಟಿ ಬೆಳೆದದ್ದು ಬೆಂಗಳೂರಿನಲ್ಲಿ. ಕರ್ನಾಟಿಕ್ ಹಾಗೂ ಹಿಂದೂಸ್ತಾನಿ ಸಂಗೀತಾಭ್ಯಾಸ ಮಾಡುತ್ತಿದ್ದ ಅವರಲ್ಲಿ ಗಾಯಕಿಯಾಗಬೇಕೆಂಬ ಆಸೆ ತುಂಬಿಕೊಂಡಿತ್ತು. ಈ ಕಾರಣಕ್ಕೇ ಕಾರ್ಪೊರೇಟ್ ಕಂಪನಿಯಲ್ಲಿ ಫಿನಾನ್ಷಿಯಲ್ ಅನಲಿಸ್ಟ್ ಆಗಿದ್ದವರು ತಮ್ಮ ಹಾದಿ ಹೊರಳಿಸಿದರು. ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಆಡಿಷನ್ ನೀಡಿದರು. ಈ ನಡುವೆ ಕಿರುತೆರೆಯಲ್ಲಿ ಸಿಕ್ಕ ಅವಕಾಶ ಅವರನ್ನು ನಟನೆಗೆ ಪ್ರೇರೇಪಿಸಿತ್ತು. ದಪ್ಪಗಿದ್ದದ್ದೇ ಅವರಿಗೆ ಅವಕಾಶದ ಬಾಗಿಲನ್ನು ತೆರೆಸಿತ್ತು. ಬಣ್ಣದ ಬದುಕಿಗೆ ಕಾಲಿಟ್ಟು ಇದೀಗ 9ರ ಹೊಸ್ತಿಲಿನಲ್ಲಿದ್ದಾರೆ.

'ನಟನೆ ನನ್ನ ಬಕೆಟ್‌ಲಿಸ್ಟ್‌ನಲ್ಲೇ ಇರಲಿಲ್ಲ. ನಾನು ಹಾಡುಗಾರ್ತಿ. ಅದರಲ್ಲೇ ಮುಂದುವರೆಯಬೇಕೆಂದು ಕೆಲಸ ಬಿಟ್ಟು ರಿಯಾಲಿಟಿ ಶೋಗಳಲ್ಲಿ ಭಾಗವಹಿಸುತ್ತಿದ್ದ ನನ್ನನ್ನು ಕಿರುತೆರೆ ಕರೆಯಿತು. ನಟನೆ ಬರದೇ ಇದ್ದರೂ ನನಗೆ ಐಡೆಂಟಿಟಿ ಕೊಟ್ಟಿತು ಗುಂಡಮ್ಮನ ಪಾತ್ರ. ಅಷ್ಟೇ ಅಲ್ಲ, ವೈಯಕ್ತಿಕವಾಗಿಯೂ ಕಿರುತೆರೆ ನನ್ನಲ್ಲಿ ಬದಲಾವಣೆ ತಂದಿತು. ಗುಂಡಮ್ಮನ ಪಾತ್ರದಿಂದ ಬಾಡಿ ಪಾಸಿಟಿವಿಟಿ ಕಲಿತೆ. ಕೀಳರಿಮೆ ಬಿಟ್ಟು ಆತ್ಮವಿಶ್ವಾಸ ಬೆಳೆಸಿಕೊಂಡೆ. ನನ್ನ ಮೇಲೆ ನನಗೆ ಪ್ರೀತಿ ಶುರುವಾಯಿತು' ಎಂದು ತಮ್ಮ ಧಾರಾವಾಹಿ ದಿನಗಳನ್ನು ನೆನೆಸಿಕೊಳ್ಳುತ್ತಾರೆ ಗೀತಾ.

ಸದ್ಯ 'ರವಿಕೆ ಪ್ರಸಂಗ' ಸಿನಿಮಾದಲ್ಲಿ ಕಾಣಿಸಿಕೊಂಡಿದ್ದು, ತಮ್ಮನ್ನು ಪೂರ್ಣಪ್ರಮಾಣದಲ್ಲಿ ನಾಯಕಿಯಾಗಿ ತೋರುತ್ತಿರುವ ಈ ಸಿನಿಮಾ, ಜನರಿಗೆ ಖಂಡಿತ ಇಷ್ಟವಾಗಲಿದೆ ಎಂದು ಭರವಸೆ ವ್ಯಕ್ತಪಡಿಸುತ್ತಾರೆ.

'ಎಲ್ಲಾ ಹೆಣ್ಣುಮಕ್ಕಳಿಗೂ ಕನೆಕ್ಟ್ ಆಗುವಂಥ ಸಿನಿಮಾ ಇದು. ಹೆಣ್ಣುಮಕ್ಕಳ ಜೀವನದಲ್ಲಿ ಇಂಥದ್ದೊಂದು ಪರಿಸ್ಥಿತಿ, ಅನುಭವ ಆಗಿಯೇ ಇರುತ್ತದೆ. ಒಂದು ಸುಂದರ ಕೌಟುಂಬಿಕ ಸಿನಿಮಾ. ರವಿಕೆಯನ್ನು ಕೇಂದ್ರವಾಗಿಟ್ಟುಕೊಂಡು ಹೆಣೆದ ಈ ಕಥೆ, ಸರಳ ಎಂದುಕೊಂಡ ವಿಷಯ ಯಾವ ಅತಿರೇಕಕ್ಕೆ ಹೋಗಬಹುದು ಎಂದು ತೋರುತ್ತದೆ. ಕಾಮಿಡಿ, ಮನರಂಜನೆ ಜೊತೆಗೆ ಪ್ರೇಕ್ಷಕರನ್ನು ಯೋಚನೆಗೂ ಹಚ್ಚುವ ಕಥೆ. ನಾನು ತುಂಬಾ ಇಷ್ಟಪಟ್ಟು ಮಾಡಿರುವ ಸಿನಿಮಾ' ಎಂದು ವಿವರಿಸುತ್ತಾರೆ.

ಈ ಕಥೆ ಕೇಳಿದ ಕೂಡಲೇ ಎರಡನೇ ಯೋಚನೆ ಮಾಡದೆ ಒಪ್ಪಿಕೊಂಡೆ ಎನ್ನುವ ಗೀತಾ, ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಲು ತಮ್ಮಿಂದಾಗುವ ಎಲ್ಲ ಪ್ರಯತ್ನ ಮಾಡುವುದಾಗಿ ಹೇಳುತ್ತಾರೆ.

'ಈ ಕ್ಷೇತ್ರಕ್ಕೆ ಬರುವ ಮುನ್ನ ನಟನೆ ಹೂವಿನ ಹಾಸಿಗೆ ಎಂದುಕೊಂಡಿದ್ದೆ. ಇಲ್ಲಿಗೆ ಬಂದ ಮೇಲೆ ಗೊತ್ತಾಯಿತು, ಯಾವುದೂ ಸುಲಭವಲ್ಲ, ಎಲ್ಲದರ ಹಿಂದೆಯೂ ಕಷ್ಟ ಇರುತ್ತದೆಂದು. ಇಲ್ಲಿ ಅವಕಾಶ ಸಿಗುವುದು ಕೂಡ ಸುಲಭವಲ್ಲ. ಎಷ್ಟೋ ಜನ ಒಂದೇ ಒಂದು ದೃಶ್ಯದಲ್ಲಿ ಕಾಣಿಸಿಕೊಳ್ಳಲು ಹಂಬಲಿಸುತ್ತಿರುತ್ತಾರೆ. ಅಂಥ ಅವಕಾಶ ನನಗೆ ಸಿಕ್ಕಾಗ ಅದಕ್ಕೆ ತಕ್ಕಂತೆ ನನ್ನನ್ನು ನಾನು ಸಿದ್ಧಪಡಿಸಿಕೊಳ್ಳುವುದೂ ಮುಖ್ಯ' ಎನ್ನುತ್ತಾರೆ.

ಈ ನಡುವೆ ಫಿಟ್‌ನೆಸ್ ಜರ್ನಿಯಲ್ಲೂ ತೊಡಗಿಕೊಂಡಿದ್ದ ಗೀತಾ, 33 ಕೆ.ಜಿ. ಇಳಿಸಿಕೊಂಡಿದ್ದಾರೆ. 'ನನ್ನನ್ನು ನಾನು ಹೇಗಿರುವೆನೋ ಹಾಗೇ ಪ್ರೀತಿಸಿಕೊಳ್ಳುತ್ತೇನೆ. ದಪ್ಪಗಿದ್ದರೂ ಜನರು ನನ್ನನ್ನು ಧಾರಾವಾಹಿಯಲ್ಲಿ ಒಪ್ಪಿದರು. ನಾಯಕಿ ತೆಳ್ಳಗೆ ಬೆಳ್ಳಗೆ ಬಳಕುವ ಬಳ್ಳಿಯಂತಿರಬೇಕು ಎಂಬ ಸಿದ್ಧಸೂತ್ರದ ಹೊರತಾಗಿ ನನ್ನನ್ನು ಮೆಚ್ಚಿದರು. ಆದರೆ ನನ್ನ ಆರೋಗ್ಯದ ಕಾರಣ ತೂಕ ಇಳಿಸಿಕೊಳ್ಳಲೇಬೇಕಿತ್ತು. ಇನ್ನೂ ಫಿಟ್‌ನೆಸ್ ಸಾಧಿಸಬೇಕಿದೆ' ಎಂದು ಹೇಳುತ್ತಾರೆ.

'ನಟನೆಗೆ ಬಂದ ಮೊದಲ ದಿನಗಳಲ್ಲಿ ನನಗೆ ಯಾವ ಆಸೆಯೂ ಇರಲಿಲ್ಲ. ಈಗ ಒಳ್ಳೆಯ ಪಾತ್ರಗಳು ಸಿಕ್ಕರೆ ಖಂಡಿತ ಅದಕ್ಕೆ ಜೀವ ತುಂಬುವ ಬಯಕೆಯಿದೆ. ಹಾಗೆಯೇ, ಹಾಡಬೇಕೆಂಬ ಹಂಬಲವೂ ಹೆಚ್ಚಿದೆ. ನಟನೆಗೆ ಸ್ವರವೂ ಸೇರಬೇಕಿದೆ' ಎನ್ನುತ್ತಾರೆ. ■